## 2 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ
## ಸಿ ಸಿ ನಂ. 735/2023

| | | |
|---|---|---|
| ಹೆಸರು | ಹರೀಶ್ | PW -03 |
| ತಂದೆಯ ಹೆಸರು | ವಿಜಯ ಕುಮಾರ್ | CW -06 |
| ವಯಸ್ಸು | 21 | |
| ಉದ್ಯೋಗ | ವಿದ್ಯಾರ್ಥಿ | ದಿನಾಂಕಃ 15.11.2024 |
| ವಾಸ | ನಿಟುವಳ್ಳಿ ಗ್ರಾಮ, ದಾವಣಗೆರೆ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಮೃತ ವಿಜಯ ಕುಮಾರ ನನ್ನ ತಂದೆ. ಚಾಸಾ.1 ನನ್ನ ಅಣ್ಣ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದಲ್ಲಿ ಆರೋಪಿ ಗೈರು ಹಾಜರಿದ್ದು, ಆತನ ಗುರುತಿನ ಬಗ್ಗೆ ಆರೋಪಿ ಪರ ವಕೀಲರು ಯಾವುದೇ ಆಕ್ಷೇಪಣೆ ಇಲ್ಲ ಎಂದು ನುಡಿದಿರುತ್ತಾರೆ.

ದಿನಾಂಕ 21.01.2023 ರಂದು ಅಮವಾಸೆ ದಿವಸ ನಾನು ಮತ್ತು ನನ್ನ ತಂದೆ ಬೈಕ್ ನಲ್ಲಿ ಕುಂಬಳೂರು ಗ್ರಾಮದಲ್ಲಿರುವ ವೀರಭದ್ರೇಶ್ವರ ದೇವಸ್ಥಾನಕ್ಕೆ ದಾವಣಗೆರೆಯಿಂದ ಶಿವಮೊಗ್ಗ ಹರಿಹರ ಮಾರ್ಗವಾಗಿ ಹೋಗುತ್ತಿರುವಾಗ, ದೇವಸ್ಥಾನ ಮುಂದೆ ಮಲೆಬೆನ್ನೂರು ಕಡೆಯಿಂದ ಹರಿಹರದ ಕಡೆಯಿಂದ ಒಂದು ಬೈಕ್ ಮೇಲೆ ಬರುತ್ತಿದ್ದು, ಸದರಿ ಬೈಕ್ ನ ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಮ್ಮ ಬೈಕ್ ಗೆ ಡಿಕ್ಕಿ ಪಡಿಸಿ, ಅಪಘಾತ ಸಂಬವಿಸಿರುತ್ತದೆ. ಸದರಿ ಅಪಘಾತದಿಂದ ನಮ್ಮ ತಂದೆಗೆ ತಲೆಗೆ ತೀವ್ರ ಪೆಟ್ಟು ಬಿದ್ದು, ಎಡಗಾಲಿನ ಮೂಳೆ ಮುರಿದಿತ್ತು, ನನಗೆ ಬಲಗೈ ಮತ್ತು ಬಲಭಾಗದ ಬೆನ್ನಿಗೆ ಗಾಯಗಳಾಗಿದ್ದವು. ನಂತರ ನಮ್ಮ ತಂದೆಯನ್ನು ನಾನು ಮಲೆಬೆನ್ನೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆ ಸಿ ಜೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಅಲ್ಲಿನ ವೈದ್ಯರು ನಮ್ಮ ತಂದೆ ಮೃತ ಪಟ್ಟಿರುವುದಾಗಿ ಹೇಳಿರುತ್ತಾರೆ. ಅದೇ ದಿನ ಮಧ್ಯಾಹ್ನ 2.00 ಗಂಟೆಗೆ ಚಾಸಾ. 1 ನನ್ನ ಅಣ್ಣ ದೂರನ್ನು ಸಲ್ಲಿಸಿರುತ್ತಾರೆ.

ನಂತರ ಮಾರನೆ ದಿನ ಅಪಘಾತವಾದ ಸ್ಥಳಕ್ಕೆ ಬಂದು ಪಂಚನಾಮೆ ಮಾಡಿ, ಕಚ್ಚಾ ನಕಾಶೆ ತಯಾರಿಸಿ, ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ ಸದರಿ ದಾಖಲೆಗಳನ್ನು ಈಗಾಗಲೇ ನಿಪಿ.2 ರಿಂದ 5 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಮತ್ತು ನಿಪಿ.3(ಬಿ)ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಅದು ವಾಹನ ಪರಿಶೀಲನಾ ಪಂಚನಾಮೆ ಆಗಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿನಯು ನೋಡಿ ಗುರುತಿಸಿದ್ದು, ಅದನ್ನು ನಿಪಿ.6 ಎಂದು ಈಗಾಗಲೇ ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.6(ಬಿ) ಎಂದು ಗುರುತಿಲಾಸಯಿತು. ಸದರಿ ಸಹಿಯನ್ನು ನಾನು ಪೋಲಿಸ್ ಠಾಣೆಯಲ್ಲಿ ಪಂಚನಾಮೆ ಕಾಲಕ್ಕೆ ಮಾಡಿರುತ್ತೇನೆ. ಆ ಕಾಲಕ್ಕೆ ಪೋಲಿಸು 2 ಛಾಯಚಿತ್ರಗಳನ್ನು ತೆಗೆದಿರುತ್ತಾರೆ. ಅವುಗಳನ್ನು ಈಗಾಗಲೇ ನಿಪಿ.7 ಮತ್ತು 8 ಎಂದು ಗುರುತಿಸಲಾಗಿದೆ. ಸದರಿ ಅಪಘಾತ ಆರೋಪಿತನ ತಪ್ಪಿನಿಂದಲೇ ಆಗಿರುತ್ತದೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ಶಿವಮೊಗ್ಗ ಹರಿಹರ ರಸ್ತೆ ರಾಜ್ಯ ಹೆದ್ದಾರಿ ಎಂದರೆ ಸರಿ. ಸದರಿ ರಸ್ತೆಯಲ್ಲಿ ಸಾಕಷ್ಟು ವಾಹನಗಳ ಸಂಚಾರ ಇದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ತಗ್ಗುಗುಂಡಿಗಳಿಗೆ ಎಂದರೆ ಸರಿ. ವೀರಭದ್ರೇಶ್ವರ ದೇವಸ್ಥಾನದ ಮುಂದೆ ಹಾದು ಹೋಗಿರುವ ರಸ್ತೆಯಲ್ಲಿ ತಗ್ಗು ಗುಂಡಿಗಳಿವೆ ಎಂದರೆ ಸರಿಯಲ್ಲ. ಸದರಿ ದೇವಸ್ಥಾನದ ಅಕ್ಕ ಪಕ್ಕದಲ್ಲಿ ಹಣ್ಣಿನ ಅಂಗಡಿ, ಪೆಟ್ರೋಲ್ ಬಂಕ್, ಡಾಭಾ, ಗ್ಯಾರೇಜ್ ಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಮಲೆಬೆನ್ನೂರು ಕಡೆಯಿಂದ ಬರುವಾಗ ಅಲ್ಲಿನ ರಸ್ತೆಯು ತಿರುವು ಇದ್ದು, ಏರುಇಳಿತ ಇರುವ ರಸ್ತೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ದೇವಸ್ಥಾನದ ಅಕ್ಕಪಕ್ಕ ಮತ್ತು ಎದುರುಗಡೆ ಭತ್ತದ ಹೊಲಗಳಿವೆ ಎಂದರೆ ಸರಿ. ಆದ್ದರಿಂದ ಸದರಿ ರಸ್ತೆಯು ಜನಬಿಡವಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.3 ರಲ್ಲಿ ಕೃತ್ಯ ಸ್ಥಳವು ಹರಿಹರದಿಂದ ಬರುತ್ತಿವಾಗ ರಸ್ತೆಯ ಬಲಭಾಗದಲ್ಲಿ ಕೃತ್ಯ ಸ್ಥಳವನ್ನು ತೋರಿಸಲಾಗಿದೆ ಎಂದರೆ ಸರಿ. ನಿಪಿ.3 ರಲ್ಲಿ ಆರೋಪಿಯ ಬೈಕ್ ಮಲೆಬೆನ್ನೂರಿನಿಂದ ರಸ್ತೆಯ ಎಡಭಾಗಕ್ಕೆ ಬರುತ್ತಿದ್ದು, ನನ್ನ ತಂದೆ ಬೈಕ್ ನ್ನು ರಸ್ತೆಯ ಚಾಲನೆ ನಿಯಮವನ್ನು ಪಾಲಿಸದೆ ಬಲಭಾಗಕ್ಕೆ ಚಲಾಯಿಸಿಕೊಂಡು ಬಂದಿದ್ದರಿಂದ ಅಪಘಾವಾಯಿತು ಎಂದರೆ ಸಾಕ್ಷಿಯು ಆರೋಪಿತನ ಬೈಕ್ ಎಡಭಾಗದ ರಸ್ತೆಯಲ್ಲಿ ಇದ್ದು, ನಮ್ಮ ಬೈಕ್ ನಿಪಿ.3 ರಲ್ಲಿ ತೋರಿಸಿರುವಂತೆ ಬಲಭಾಗಕ್ಕೆ ಇರದೆ ರಸ್ತೆಯ ಮಧ್ಯ ಇತ್ತು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನಮ್ಮ ತಂದೆ ಬೈಕ್ ನ್ನು ರಸ್ತೆಯ ಬಲಭಾಗಕ್ಕ ತೆಗೆದುಕೊಳ್ಳುವಾಗ ಇಂಡಿಕೆಟರ್ ನ್ನು ಹಾಕಿದ್ದರು ಎಂದು ನುಡಿಯುತ್ತಾರೆ. ಸದರಿ ಅಪಘಾತದ ರಸ್ತೆಯಲ್ಲಿ ತಗ್ಗು ಗುಂಡಿಗಳಿಂದ ಕುಡಿದ್ದರಿಂದ ವಾಹನಗಳು ಅತಿವೇಗವಾಗಿ ಚಲಾಯಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತವು ನಮ್ಮ ತಂದೆಯು ತಮ್ಮ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದ ಆಗಿದ್ದು, ಆರೋಪಿಯ ತಪ್ಪಿನಿಂದ ಅಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯು ಬೈಕ್ ನ್ನು ಚಲಾಯಿಸುವಾಗ ಇಂಡಿಕೆಟರ್ ಹಾಕಿರಲಿಲ್ಲ ಎಂದರೆ ಸರಿಯಲ್ಲ.

ನನಗೆ ದೂರನ್ನು ಸಲ್ಲಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಗಾಯಗಳಾಗಿದ್ದರಿಂದ ಚಾಸಾ.1 ರವರು ದೂರನ್ನು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಮಹಜರ್ ಕಾಲಕ್ಕೆ ನಾನು ಹಾಜರಿದ್ದೆ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎರಂದೆ ಸರಿಯಲ್ಲ. ನಿಪಿ.2 ಮತ್ತು 3 ನ್ನು ಪೋಲಿಸ್ ಠಾಣೆಯಲ್ಲಿ ತಯಾರಿಸಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುಂತೆ ನಿಪಿ.4 ರಿಂದ ನಿಪಿ.8 ರವರೆಗಿನ ದಾಖಲೆಗಳನ್ನು ಸುಳ್ಳು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ನನ್ನ ತಂದೆ ಮೃತ ಪಟ್ಟಿದ್ದರಿಂದ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿ. ಸದರಿ ಅಪಘಾದಲ್ಲಿ ಆರೋಪಿತರಿಗೂ ಗಾಯಾಳಾಗಿವೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಎದುರಿಗೆ ಬೈಕ್ ಮೇಲೆ ಬರುತ್ತಿದ್ದ ವ್ಯಕ್ತಿಗಳ ಹೆಸರು ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ, ಹರಿಹರ.